## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 729 (950)

ಸದಸ್ಯರ ಹೆಸರು : ಶ್ರೀ ಅಡಗೂರ್ ಹೆಚ್. ವಿಶ್ವನಾಥ್

ಉತ್ತರಿಸಬೇಕಾದ ದಿನಾಂಕ : 15.12.2025

ಉತ್ತರಿಸುವವರು : ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಹಾವು ರಕ್ಷಕರನ್ನು ಗುರುತಿಸುವಿಕೆ, ಮಾನ್ಯತೆ ಹಾಗೂ ಗೌರವಧನ ನೀಡುವ ಕುರಿತು ಸರ್ಕಾರ ಕ್ರಮ ಕೈಗೊಂಡಿದೆಯೇ?<br>ಕೈಗೊಂಡಿದ್ದರೆ ಮಾಹಿತಿ ನೀಡುವುದು;</td><td>ಅರಣ್ಯ ಇಲಾಖೆಯಲ್ಲಿ ಯಾವುದೇ ಹಾವು ಸಂರಕ್ಷಕರನ್ನು ಪ್ರತ್ಯೇಕವಾಗಿ ನೇಮಿಸಿರುವುದಿಲ್ಲ.<br>ಪ್ರಸ್ತುತ ಇಲಾಖೆಯಲ್ಲಿ ಹಾವು ಸಂರಕ್ಷಕರಿಗೆ ಯಾವುದೇ ರೀತಿಯ ಗೌರವಧನ ನೀಡಲಾಗುತ್ತಿಲ್ಲ. ಆದರೆ, ಸ್ಥಳೀಯ ಸಂಸ್ಥೆಯವರು ಹಾವು ಸಂರಕ್ಷಕರನ್ನು ನೇಮಿಸಿದ್ದಲ್ಲಿ ಸದರಿ ಸಂಘ-ಸಂಸ್ಥೆಗಳು ಹಾವು ಸಂರಕ್ಷಕರಿಗೆ ಗೌರವಧನ, ಗುಂಪು ವಿಮೆ ಹಾಗೂ ವೈದ್ಯಕೀಯ ಸೌಲಭ್ಯ ಒದಗಿಸುವ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕಾಗಿರುತ್ತದೆ.</td></tr>
<tr><td>ಆ)</td><td>ಹಾವುಗಳು ವನ್ಯಜೀವಿ ಸಂರಕ್ಷಣಾ ಕಾಯಿದೆ 1972ರ ವ್ಯಾಪ್ತಿಗೆ ಒಳಪಡುತ್ತದೆಯೇ; (ಮಾಹಿತಿ ಒದಗಿಸುವುದು);</td><td>ವನ್ಯಜೀವಿ (ರಕ್ಷಣೆ) ಕಾಯಿದೆ 1972 ರಲ್ಲಿ ಹಾವು ಪ್ರಭೇದಗಳ (2022 ರಲ್ಲಿ ತಿದ್ದುಪಡಿ ಮಾಡಿದಂತೆ) ವಿವರ ಕೆಳಕಂಡಂತಿವೆ.
<table>
<tr><th>Sl No</th><th>Snake Species</th></tr>
<tr><td colspan="2">Schedule I</td></tr>
<tr><td>1.</td><td>Indian Cobras (All species of the Genus Naja)</td></tr>
<tr><td>2.</td><td>King Cobra (All species of the Genus Ophiophagus)</td></tr>
<tr><td>3.</td><td>Checkered Keelback</td></tr>
<tr><td>4.</td><td>Dhaman or Indian Rat Snake</td></tr>
<tr><td>5.</td><td>Dog-faced Water Snake</td></tr>
<tr><td>6.</td><td>Indian Egg Eating Snake</td></tr>
<tr><td>7.</td><td>Olive Keelback Water Snake</td></tr>
<tr><td>8.</td><td>Russell's Viper</td></tr>
<tr><td>9.</td><td>All species of the Genus Python</td></tr>
<tr><td>10.</td><td>Reticulated Python</td></tr>
</table>
<table>
<tr><th>Sl No</th><th>Snake Species</th></tr>
<tr><td colspan="2">Schedule II</td></tr>
<tr><td>1.</td><td>All species of the Family Boidae except for those listed in Schedule I</td></tr>
<tr><td>2.</td><td>Blind Snakes (All species of the Family Typhlopidae)</td></tr>
<tr><td>3.</td><td>Colubrid Snakes (All species of the Family Colubridae except those listed in Schedule I)</td></tr>
<tr><td>4.</td><td>Elapid Snakes (All species of the Family Elapidae except for those listed in Schedule I)</td></tr>
<tr><td>5.</td><td>Sand snakes (All species of Family Psammophiidae)</td></tr>
<tr><td>6.</td><td>Shield-tailed Snakes (All species of the Family Uropeltidae)</td></tr>
<tr><td>7.</td><td>Sunbeam Snake (All species of the Family Xenopeltidae)</td></tr>
<tr><td>8.</td><td>Thread Snakes (All species of the Family Leptotyphlopidae)</td></tr>
<tr><td>9.</td><td>Vipers (All species of the Family Viperidae except for those listed in Schedule I)</td></tr>
</table>
Schedule IV</td></tr>
</table>

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| | | 1. Colubridae: Typical snakes, water snakes, whipsnakes<br>2. Bolyeriidae spp.<br>3. Elapidae: Cobras, coral snakes<br>4. Loxocemidae: Mexican dwarf boas<br>5. Pythonidae: Pythons<br>6. Tropidophiidae: Wood boas<br>7. Vipers |
| ಇ) | ಮಾನವ ಮತ್ತು ಹಾವು ಸಂಘರ್ಷ ನಿರ್ವಹಣೆಗೆ ಸರ್ಕಾರ ಕೈಗೊಂಡ ಕ್ರಮಗಳೇನು; | ಅರಣ್ಯ ಇಲಾಖೆಯಿಂದ ಮಾನವ-ಹಾವುಗಳ ಸಂಘರ್ಷ, ನಿರ್ವಹಣೆ ಮತ್ತು ಉಪಶಮನ ಕಾರ್ಯಾಚರಣೆಗೆ ಸಂಬಂಧಿಸಿದಂತೆ ಒಂದು ಕೈಪಿಡಿ (SOP) ಹೊರಡಿಸಲಾಗಿದೆ.<br>ಸದರಿ ಕೈಪಿಡಿ ಮಾರ್ಗಸೂಚಿಯನ್ವಯ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಈಗಾಗಲೇ ಹಾವು ರಕ್ಷಣೆಯಲ್ಲಿ ಗುರುತಿಸಿಕೊಂಡಿರುವ/ ಪಾಲ್ಗೊಳ್ಳುತ್ತಿರುವವರಿಗೆ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಿ, ತರಬೇತಿಯಲ್ಲಿ ಪಾಲ್ಗೊಂಡವರ ಅರ್ಹತೆ, ಕಾರ್ಯಕ್ಷಮತೆಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ತೃಪ್ತಿಕರವೆಂದು ಕಂಡುಬಂದಲ್ಲಿ, ಹಾವು ರಕ್ಷಣೆಯಲ್ಲಿ / ಕಾರ್ಯಾಚರಣೆಯಲ್ಲಿ ತೊಡಗಿಸಿಕೊಳ್ಳುವ ಸಲುವಾಗಿ, ಅಂತಹವರಿಂದ ದೃಢೀಕರಣ (Due Undertaking) ಪಡೆದು, ಪ್ರಮಾಣೀಕರಿಸುವಂತೆ ಎಲ್ಲಾ ವೃತ್ತಾಧಿಕಾರಿಗಳಿಗೆ ನಿರ್ದೇಶಿಸಲಾಗಿದೆ. |
| ಈ) | ರಾಜ್ಯದಲ್ಲಿ ಸರ್ಕಾರವು ಹಾವು ರಕ್ಷಕರನ್ನು ಜಿಲ್ಲಾವಾರು/ ತಾಲ್ಲೂಕುವಾರು / ವಲಯವಾರು / ವಲಯವಾರು ವ್ಯಾಪ್ತಿಯಲ್ಲಿ ಎಷ್ಟು ಜನರನ್ನು ಗುರುತಿಸಲಾಗಿದೆ; (ವಿವರ ಒದಗಿಸುವುದು): | ಅರಣ್ಯ ಇಲಾಖೆಯಿಂದ ಹಾವು ರಕ್ಷಣೆಗಾಗಿ ಯಾರಿಗೂ ಗುರುತಿಸಲಾಗಿರುವುದಿಲ್ಲ.<br>ಮಾನವ-ಹಾವುಗಳ ಸಂಘರ್ಷ, ನಿರ್ವಹಣೆ ಮತ್ತು ಉಪಶಮನ ಕಾರ್ಯಾಚರಣೆ ಕೈಪಿಡಿ ಮಾರ್ಗಸೂಚಿಯನ್ವಯ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಈಗಾಗಲೇ ಹಾವು ರಕ್ಷಣೆಯಲ್ಲಿ ಗುರುತಿಸಿಕೊಂಡಿರುವ/ ಪಾಲ್ಗೊಳ್ಳುತ್ತಿರುವವರಿಗೆ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಿ, ತರಬೇತಿಯಲ್ಲಿ ಪಾಲ್ಗೊಂಡವರ ಅರ್ಹತೆ, ಕಾರ್ಯಕ್ಷಮತೆಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ತೃಪ್ತಿಕರವೆಂದು ಕಂಡುಬಂದಲ್ಲಿ, ಹಾವು ರಕ್ಷಣೆಯಲ್ಲಿ / ಕಾರ್ಯಾಚರಣೆಯಲ್ಲಿ ತೊಡಗಿಸಿಕೊಳ್ಳುವ ಸಲುವಾಗಿ, ಅಂತಹವರಿಂದ ದೃಢೀಕರಣ (Due Undertaking) ಪಡೆದು, ಪ್ರಮಾಣೀಕರಿಸುವಂತೆ ಎಲ್ಲಾ ವೃತ್ತಾಧಿಕಾರಿಗಳಿಗೆ ನಿರ್ದೇಶಿಸಲಾಗಿದೆ. |
| ಉ) | ರಾಜ್ಯದಲ್ಲಿ 3 ವರ್ಷದಿಂದ ಹಾವು ಕಡಿತಕ್ಕೆ ಒಳಗಾಗಿರುವ ಪ್ರಕರಣಗಳೆಷ್ಟು? (ಸಂಪೂರ್ಣ ವಿವರ ಒದಗಿಸುವುದು); | ಹಾವು ಕಡಿತಕ್ಕೆ ಒಳಗಾಗಿ ಮೃತಪಟ್ಟಲ್ಲಿ, ಸರ್ಕಾರದ ಸುತ್ತೋಲೆ ಸಂಖ್ಯೆ: ಕಂಇ 49 ಎಂಎಸ್‌ಟಿ 2020(ಇ), ದಿನಾಂಕ 26-08-2020 ರಲ್ಲಿ ಕಂದಾಯ ಇಲಾಖೆಯಿಂದ ಪರಿಹಾರಧನ ಪಾವತಿಸಲಾಗುತ್ತಿದೆ. ಆದುದರಿಂದ ಅರಣ್ಯ ಇಲಾಖೆಯಲ್ಲಿ ಹಾವು ಕಡಿತದಿಂದ ಮೃತಪಟ್ಟಿರುವ ಪ್ರಕರಣಗಳ ಅಂಕಿಅಂಶಗಳು ಲಭ್ಯವಿರುವುದಿಲ್ಲ. |

ಸಂಖ್ಯೆ: ಅಪಜೀ 349 ಎಫ್ ಡಬ್ಲ್ಯೂ ಎಲ್ 2025

(ಈಶ್ವರ ಬಿ. ಖಂಡ್ರೆ)
ಅರಣ್ಯ, ಜೀವಿಶಾಸ್ತ್ರ, ಮತ್ತು ಪರಿಸರ ಸಚಿವರು